ಪರಿಸರ ನಾಶ

940(796); ಡಾ॥ ಮಾಲಕರೆಡ್ಡಿ (ಯಾದಗಿರಿ)

ಅ) ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ ಘಟಕಗಳಿಂದ ಉತ್ಪತ್ತಿಯಾಗುವ ತ್ಯಾಜ್ಯದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಪರಿಸರ ನಾಶವಾಗಿ, ಜಲ ಮೂಲಗಳು ಸಹ ನಾಶವಾಗಿವೆ ಎಂಬ ದೂರುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಪರಿಸರ ನಾಶ ಮತ್ತು ಜಲ ಮೂಲಗಳ ನಾಶಕ್ಕೆ ಕಾರಣರಾದವರೊಂದಿಗೆ ಶಾಮೀಲಾಗಿರುವ ಮಂಡಳಿಯ ಪ್ರಾದೇಶಿಕ ಮತ್ತು ಕೇಂದ್ರ ಕಚೇರಿಯಲ್ಲಿನ ಕೆಲವು ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ B. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ ಮಾಡುವಾಗ ನೀರಿನೊಂದಿಗೆ ಮಿಶ್ರಿತವಾದ ಕಲ್ಲುಪುಡಿ ಹೊರಬರುತ್ತದೆ ಮತ್ತು ಅದನ್ನು ಸಂಸ್ಕರಿಸಲು ಎಲ್ಲ ಘಟಕಗಳಲ್ಲಿ Settling Tank ಗಳನ್ನು ಸ್ಥಾಪಿಸಿರುತ್ತಾರೆ ಮತ್ತು ನೀರನ್ನು ಪುನರ್ ಬಳಕೆ ಮಾಡಲಾಗುತ್ತಿದೆ. ಇನ್ನುಳಿದ ಕಲ್ಲುಪುಡಿ ತ್ಯಾಜ್ಯವನ್ನು ನಿಗದಿತ ಪ್ರದೇಶದಲ್ಲಿ ವಿಲೇವಾರಿ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಘಟಕಗಳಿಗೆ ಸಮ್ಮತಿಯನ್ನು ನೀಡುವ ಸಂದರ್ಭದಲ್ಲಿ ಷರತ್ತು ಹಾಕಲಾಗಿರುತ್ತದೆ.

ಆದಾಗ್ಯೂ, ರಾಜ್ಯದ ಬಾಗಲಕೋಟೆ ಮತ್ತು ತುಮಕೂರಿನಲ್ಲಿ ಅಸಮರ್ಪಕ ತ್ಯಾಜ್ಯ ವಿಲೇವಾರಿ ಕುರಿತು ದೂರುಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಬಂದಿರುತ್ತದೆ.

ಬಾಗಲಕೋಟೆ ಜಿಲ್ಲೆಯ ಇಲಕಲ್ ಪಟ್ಟಣದಲ್ಲಿರುವ ಘಟಕಗಳಿಗೆ ಮಂಡಳಿ ವತಿಯಿಂದ ಸಾರ್ವಜನಿಕ ದೂರಿನನ್ವಯ 2011 ರಲ್ಲಿ ಮತ್ತು 2014 ರಲ್ಲಿ ಘಟಕಗಳನ್ನು ಮುಚ್ಚುವ ಆದೇಶವನ್ನು ನೀಡಲಾಗಿತ್ತು. ಸದರಿ ಘಟಕದವರು ತ್ಯಾಜ್ಯವನ್ನು ಸಮರ್ಪಕ ರೀತಿಯಲ್ಲಿ ವಿಲೇವಾರಿ

ಮಾಡುವ ಬಗ್ಗೆ ಮುಚ್ಚಳಿಕೆಯನ್ನು ನೀಡಿದ ಮೇಲೆ ಮುಚ್ಚುವ ಆದೇಶವನ್ನು ಹಿಂಪಡೆಯಲಾಗಿರುತ್ತದೆ.

ಆದರೆ ಉದ್ದಿಮೆಗಳು ಮುಚ್ಚಳಿಕೆಗೆ ಬದ್ದವಾಗದ ಕಾರಣ ಉಪ ವಿಭಾಗೀಯ ದಂಡಾಧಿಕಾರಿಗಳು, ಬಾಗಲಕೋಟೆ ಇವರು ದಿನಾಂಕ: 18.6.2015 ರಂದು ಇಲಕಲ್ಲಿನ 197 ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ ಘಟಕಗಳಿಗೆ Cr.PC 133 ನಲ್ಲಿ ಆದೇಶ ನೀಡಿ ಉದ್ದಿಮೆಗಳ ಚಟುವಟಿಕೆಗಳನ್ನು ಸ್ಥಗಿತಗೊಳಿಸಿರುತ್ತಾರೆ.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಲ್ಲು ಕತ್ತರಿಸುವ ಹಾಗೂ ಪಾಲಿಶ್ ಮಾಡುವ ಘಟಕಗಳಿಂದ ಉಂಟಾಗುವ ತ್ಯಾಜ್ಯವನ್ನು ಚಾಲ್ತಿಯಲ್ಲಿರದ ಕ್ವಾರಿಗಳನ್ನು ಗುರುತಿಸಿ ಅಲ್ಲಿ ವಿಲೇವಾರಿ ಮಾಡಲು ಕ್ರಮ ಜರುಗಿಸಿರುತ್ತದೆ.

ತುಮಕೂರು ಜಿಲ್ಲೆಯಲ್ಲೂ ಸಹ ಈ ತರಹ ಘಟಕಗಳು ಇದ್ದು ಇವು ಸಮರ್ಪಕವಾಗಿ ತ್ಯಾಜ್ಯವನ್ನು ನಿರ್ವಹಿಸದೆ ಇರುವ ಕಾರಣ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಬಂದಪಟ್ಟ ಉದ್ದಿಮೆಗಳ ಮೇಲೆ ಜಲ ಹಾಗೂ ವಾಯು ಕಾಯ್ದೆಗಳನ್ವಯ ಕ್ರಮ ಜರುಗಿಸಿರುತ್ತಾರೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಸದರಿ ವಿಷಯದಲ್ಲಿ ಶಾಮೀಲಾಗಿರುವ ವರದಿ ಮಂಡಳಿಯಿಂದ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಇಂತಹ ದೂರುಗಳೇನಾದರು ಮಂಡಳಿಯ ಅಧಿಕಾರಿಗಳ ಮೇಲೆ ಬಂದಂತಹ ಸಂದರ್ಭದಲ್ಲಿ ಅಂತಹ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವ ಅಧಿಕಾರ ಮಂಡಳಿಗೆ ಇರುತ್ತದೆ. ಕಾರಣ ಸರ್ಕಾರದಿಂದ ಶಿಸ್ತು ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.